ಪಶ್ಚಿಮ ಮತ್ತು ಕನ್ನಡ ಸಾಹಿತ್ಯ ಸಂದರ್ಭದ ಭಾಷಾಂತರ ಪ್ರಕ್ರಿಯೆಗಳು

ವಿಜಯೇಂದ್ರ ಕುಮಾರ್ ಜಿ.ಎಲ್.*

DOI: https://doi.org/10.5281/zenodo.22301393

ABSTRACT

ಪಾಶ್ಚಾತ್ಯ ಮತ್ತು ಕನ್ನಡ ಸಾಹಿತ್ಯದ ಹಿನ್ನೆಲೆಯಲ್ಲಿ ಭಾಷಾಂತರ ಪ್ರಕ್ರಿಯೆಯ ತಾತ್ವಿಕ ಹಾಗೂ ಪ್ರಾಯೋಗಿಕ ಆಯಾಮಗಳನ್ನು ಇಲ್ಲಿ ಸಮಗ್ರವಾಗಿ ವಿಶ್ಲೇಷಿಸಲಾಗಿದೆ. ಭಾಷಾಂತರವೆಂದರೆ ಕೇವಲ ಯಥಾವತ್ ಶಬ್ದಾನುವಾದವಲ್ಲ; ಅದೊಂದು ಸೃಜನಶೀಲ, ಸಾಂಸ್ಕೃತಿಕ ಹಾಗೂ ಮರುಸೃಷ್ಟಿಯ ಕ್ರಿಯೆ ಎಂಬುದನ್ನು ಎಂಟು ಭಿನ್ನ ಮಾದರಿಗಳ ಮೂಲಕ ಚರ್ಚಿಸಲಾಗಿದೆ. ಕ್ಷಣ ಭಾಷಾಂತರ, ಅಣಕ (ಮಿಮಿಕ್ರಿ), ಮೌಖಿಕ ಸಾಹಿತ್ಯದ ಲಿಪೀಕರಣ, ಯಂತ್ರಾನುವಾದ, ವಾಪಸಾತಿ ಭಾಷಾಂತರ, ರಫ್ತು ಅಥವಾ ವಿಲೋಮ ಭಾಷಾಂತರ, ಗುಂಪು ಭಾಷಾಂತರ ಮತ್ತು ಸಂಕ್ಷೇಪೀಕರಣಗಳೆಂಬ ವಿಶಿಷ್ಟ ವಿಧಾನಗಳನ್ನು ಉದಾಹರಣೆಗಳ ಸಹಿತ ವಿವರಿಸಲಾಗಿದೆ. ಬಿ.ಎಂ.ಶ್ರೀ, ಎ.ಕೆ. ರಾಮಾನುಜನ್ ಅವರ ಪ್ರಯೋಗಗಳು ಹಾಗೂ ಪಂಪ, ರನ್ನರ ಕಾವ್ಯಗಳ ಸಿಂಹಾವಲೋಕನ ಕ್ರಮಗಳನ್ನು ಆಧರಿಸಿ, ಭಾಷಾಂತರವು ಕೇವಲ ನಕಲಾಗಿರದೆ ಸಾಹಿತ್ಯಕ ಸಂವೇದನೆ, ಸಾಂಸ್ಕೃತಿಕ ಮುಖಾಮುಖಿ ಹಾಗೂ ಪ್ರತಿಪಠ್ಯ ನಿರ್ಮಾಣದ ಪ್ರಬಲ ಸಾಧನವಾಗಿ ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ಈ ಲೇಖನದಲ್ಲಿ ಸೈದ್ಧಾಂತಿಕವಾಗಿ ಕಟ್ಟಿಕೊಡಲಾಗಿದೆ.

KEYWORDS: ಭಾಷಾಂತರ ಪ್ರಕ್ರಿಯೆಗಳು, ಸೃಜನಶೀಲ ಭಾಷಾಂತರ, ಅಣಕ (ಮಿಮಿಕ್ರಿ), ವಿಲೋಮ ಭಾಷಾಂತರ, ಸಂಕ್ಷೇಪೀಕರಣ.

* **ಡಾ. ವಿಜಯೇಂದ್ರ ಕುಮಾರ್ ಜಿ.ಎಲ್.,** ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿಡ್ಲಘಟ್ಟ.

ಪೀಠಿಕೆ

ವಸಾಹತುಶಾಹಿಯ ಪರಿಣಾಮವಾಗಿ ಕನ್ನಡದಲ್ಲಿ ಮೂಲನಿಷ್ಠೆಯ ಪ್ರಶ್ನೆ ಮುನ್ನೆಲೆಗೆ ಬಂತು ಎನ್ನುವುದು ನಿಜ. ಆದರೂ ಕನ್ನಡ ಭಾಷಾಂತರ ಸಂಕಥನದಲ್ಲಿ ಸೃಜನಶೀಲ ಭಾಷಾಂತರದ ವಿರೋಧೀ 'ಎಳೆ' ಇರುವುದರ ಜೊತೆಜೊತೆಗೆಯೇ, ಭಾಷಾಂತರ ಅದು ರೂಪಾಂತರವಾಗಿರಲಿ ಅಥವಾ ಚಾರಿತ್ರೀಕರಣ, ಪುರಾಣೀಕರಣ, ಅಳವಡಿಕೆ, ಕಥಾಂತರ, ಪ್ರತಿಪಠ್ಯ ನಿರ್ಮಾಣ ಹೀಗೆ ಏನೇ ಆಗಿರಲಿ ಸೃಜನಶೀಲವಾಗಿರಬೇಕು ಎಂಬ ದೊಡ್ಡ ಮಟ್ಟದ ಅಲೆ ತಾತ್ವಿಕವಾಗಿಯೂ ಆಚರಣೆಯ ರೂಪದಲ್ಲಿಯೂ ಇರುವುದನ್ನು ಕಾಣಬಹುದಾಗಿದೆ.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಲೇಖನದಲ್ಲಿ ಪಶ್ಚಿಮ ಮತ್ತು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ನಡೆದ ಭಾಷಾಂತರ ಪ್ರಕ್ರಿಯೆಗಳನ್ನು ಗುರುತಿಸಿಕೊಳ್ಳಲಾಗಿದೆ. ಹಾಗೂ ಇದರ ಜೊತೆಜೊತೆಗೆಯೇ, ಪಶ್ಚಿಮ ಮತ್ತು ಕನ್ನಡ ಪರಂಪರೆಗಳಲ್ಲಿ ಸಾಹಿತ್ಯಕ ಪಠ್ಯಗಳ ಮೂಲಕ ರೂಪುಗೊಂಡ ಕೆಲವು ಭಾಷಾಂತರ ಮಾದರಿಗಳನ್ನು ಚರ್ಚಿಸಲಾಗಿದೆ.

ಕ್ಷಣ ಭಾಷಾಂತರ

ಇದು ತತ್‌ಕ್ಷಣದಲ್ಲಿ ನಡೆಯುವ ಭಾಷಾಂತರ ಚಟುವಟಿಕೆ. ಕ್ಷಣ ಭಾಷಾಂತರ ಅಥವಾ ತಾಕ್ಷಣಿಕ ಭಾಷಾಂತರ ಎಂದು ಕನ್ನಡದಲ್ಲಿ ನಾವು ಕರೆದುಕೊಳ್ಳಬಹುದಾದ ಈ ಮಾದರಿಯ ಭಾಷಾಂತರವನ್ನು ಇಂಗ್ಲಿಷಿನಲ್ಲಿ 'ಸೈಟ್ ಟ್ರಾನ್ಸ್‌ಲೇಶನ್' (Sight Translation) ಎನ್ನುವರು. ಅನ್ಯಭಾಷಿಕರ ಭಾಷಣಗಳನ್ನು ಸ್ಥಳೀಯರಿಗೆ ಆಗಿಂದಾಗ್ಗೆ ಲೈವ್‌ಆಗಿ ಮರುನಿರೂಪಿಸಬೇಕಾದ ಸಂದರ್ಭಗಳಲ್ಲಿ, ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ, ವಿದೇಶಾಂಗ ವ್ಯವಹಾರಗಳಲ್ಲಿ, ಸಂದರ್ಶನಗಳಲ್ಲಿ, ಟೆಲಿವಿಷನ್ ಮತ್ತು ಪತ್ರಿಕೋದ್ಯಮದಲ್ಲಿ, ಪ್ರವಾಸಿ ತಾಣಗಳಲ್ಲಿ ಭಿನ್ನ ಭಾಷಿಕರ ನಡುವೆ 'ಕ್ಷಣ ಭಾಷಾಂತರ' ಅನಿವಾರ್ಯ.

ಕ್ಷಣ ಭಾಷಾಂತರ ನಡೆಯುವುದು ದುಭಾಷಿಗಳ ಮೂಲಕ. ಸಾಮಾನ್ಯವಾಗಿ ದುಭಾಷಿಯು ವೃತ್ತಿನಿರತ ಭಾಷಾಂತರಕಾರನಾಗಿದ್ದು, ಕೇಳುಗರ ಅನುಕೂಲಕ್ಕಾಗಿ ಶಬ್ದಾನುವಾದ ಮಾಡಬಹುದು, ಕೆಲವೊಮ್ಮೆ ಮೂಲದ ವಿವರಗಳನ್ನು ಸಾರರೂಪದಲ್ಲಿ ಸಂಗ್ರಹಿಸಿ ಇನ್ನೊಂದು ಭಾಷೆಯಲ್ಲಿ ಹೇಳಬಹುದು.

ಅಣಕ (ಮಿಮಿಕ್ರಿ)

ಇದು ಡಿ.ಆರ್.ನಾಗರಾಜ್ ಅವರು ಶೋಧಿಸಿದ ಭಾಷಾಂತರ ಮಾದರಿ. ವಸಾಹತೋತ್ತರ ಚಿಂತನೆಗಳ ಹಿನ್ನೆಲೆಯಲ್ಲಿ ಭಾಷಾಂತರ ಪ್ರಕ್ರಿಯೆ ಕುರಿತು ಚಿಂತಿಸುವ ಇವರು, ಭಾಷಾಂತರವನ್ನು 'ಅನುಕರಣೆ' ಎಂದು ಭಾವಿಸದೆ 'ಅಣಕ'ವಾಗಿ ನೋಡುತ್ತಾರೆ. ಆ ಮೂಲಕ ವಸಾಹತುಶಾಹಿ ಸಂದರ್ಭದಲ್ಲಿ ಕನ್ನಡಕ್ಕೆ ಅನುವಾದಗೊಂಡ ಕೃತಿಗಳನ್ನು ವಿಶ್ಲೇಷಿಸುತ್ತ, ಭಾಷಾಂತರವು ಹೇಗೆ ಒಂದು

ವಿದ್ರೋಹದ ಕ್ರಿಯೆಯಾಗಿದೆ ಎಂಬುದನ್ನು ತೋರುತ್ತಾರೆ. ಎಡ್ವರ್ಡ್ ಸೈದ್ ಮುಂತಾದ ವಸಾಹತೋತ್ತರ ಸಿದ್ಧಾಂತಿಗಳಿಗಿಂತ ಭಿನ್ನವಾಗಿ ನೋಡುವ ಕ್ರಮ ಡಿ.ಆರ್.ನಾಗರಾಜ್ ಅವರದು. ಪಾಶ್ಚಾತ್ಯ ಸಾಹಿತ್ಯವನ್ನು ಸ್ವೀಕರಿಸುತ್ತಲೇ, ಕನ್ನಡದಲ್ಲಿ ವಸಾಹತುಶಾಹೀ ಸಂಸ್ಕೃತಿಯನ್ನು ಅಣಕಿಸುವ, ಬುಡಮೇಲು ಮಾಡುವ ಕೃತ್ಯಗಳು ಭಾಷಾಂತರಗಳ ಮೂಲಕ ಹೇಗೆ ನಡೆದುವು ಎನ್ನುವುದನ್ನು 'ಅಣಕದ ಕೋತಿ'ಯ ಕತೆಯ ನಿರೂಪಣೆ ಮತ್ತು ಕುವೆಂಪು ಅವರ 'ರಕ್ತಾಕ್ಷಿ', 'ಬಿರುಗಾಳಿ' ನಾಟಕಗಳ ವಿಶ್ಲೇಷಣೆಯ ಮೂಲಕ ಚರ್ಚಿಸುತ್ತಾರೆ. ಇವರ ದೃಷ್ಟಿಯಲ್ಲಿ ಭಾಷಾಂತರವೆನ್ನುವುದು ಶತ್ರುವಿನ ಎದುರು ಹುಚ್ಚನಂತೆ ನಟಿಸುತ್ತ ಅಣಕಿಸುತ್ತ ಬದುಕಿಕೊಳ್ಳುವ ಕಲೆ.

ಬಿ.ಎಂ.ಶ್ರೀ ಅವರ 'ಕಾಳಗದ ಪದ' ಮತ್ತು ಅದನ್ನು ಅನುಸರಿಸಿ (ಅಣಕಿಸಿ) ಎ.ಕೆ. ರಾಮಾನುಜನ್ ಅವರು ಬರೆದಿರುವ 'ಏಳಿಗೆಯ ಪದ' ಎಂಬ ಕವನವನ್ನು ಲಘು ಅಣಕಕ್ಕೆ ಉದಾಹರಣೆಯಾಗಿ ಗಮನಿಸಬಹುದು:

ಏಳಿಗೆಯ ಪದ

ಏಳೆ, ಮರಿ, ಏಳ್ಮಗಳೆ!
ಏಳಿ, ಅಳಿಯ ಏಳಿ.
ನಿನ್ನಿಮ್ಮ ಬುಕ್ಕುಗಳ
ಕೂಡಿಕೊಳ ಏಳಿ.
ಏಳಿರಣ್ಣ, ಏಳಿರಣ್ಣ
ಅದೊ ಗಂಟೆ ಕೇಳಿ.
ಕನ್ನೆಯರ, ನಂಟರಿರ,
ಬದುಕಿ, ಏಳಿ, ಏಳಿ.

ಕಾಳಗದ ಪದ

ಕಾಳೆ, ಹರೆ, ಕೊಂಬುಗಳ
ಏಳಿ, ಮೊಳಗಿ, ಏಳಿ,
ನಾಡುಗಳ ಕುಳಗಳನ್ನು
ಕೂಡಿಕೊಳ ಹೇಳಿ.
ಬನ್ನಿರಣ್ಣ, ಬನ್ನಿರಣ್ಣ
ಆದೊ ಕೂಗು, ಕೇಳಿ.
ಮನ್ನೆಯರ, ಬಂಟರಿರ,
ಒದಗಿ, ಏಳಿ, ಏಳಿ.

ಈ ಬಗೆಯ ಪ್ರಯೋಗ ತಮಾಷೆಯಂತೆ ಕಂಡರೂ, ಇದು ನಿಜಕ್ಕೂ ಕವಿಯೊಳಗಿನ ಪ್ರತಿಸ್ಪಂದನ ಪ್ರತಿಭೆಗೆ ಉದಾಹರಣೆ. ಬಿ.ಎಂ.ಶ್ರೀಯವರ 'ಕಾಳಗದ ಪದ' ಕವನಕ್ಕೆ ಮೂಲ, ಸ್ಕಾಟ್ (1771–1832) ಕವಿಯ 'ಗ್ಯಾದರಿಂಗ್ ಸಾಂಗ್.'

ಸೈನಿಕರನ್ನು ಯುದ್ಧಕ್ಕೆ ಹೊರಡಿಸುವ ಸಂದರ್ಭದಲ್ಲಿ ಉತ್ತೇಜಿಸುವುದಕ್ಕಾಗಿ ರಚನೆಯಾದ ಕವನ. ಅದನ್ನು ಬಿ.ಎಂ.ಶ್ರೀ ಅವರು 'ಕಾಳಗದ ಪದ'ವನ್ನಾಗಿ ಭಾಷಾಂತರ ಮಾಡಿದರೆ, ಅದರ ಅಣಕದ ಹಾಗೆ, ಎ.ಕೆ.ರಾಮಾನುಜನ್ 'ಏಳಿಗೆಯ ಪದ' ರಚಿಸಿದ್ದಾರೆ. ಇಲ್ಲಿಯ ಅಣಕವು 'ಕಾಳಗದ ಪದ' ಪಠ್ಯವನ್ನು ಕುರಿತದ್ದೂ ಹೌದು, ತಮ್ಮ ಏಳಿಗೆಯನ್ನಷ್ಟೇ ನೋಡಿಕೊಳ್ಳುತ್ತಿರುವ ಸ್ವಾರ್ಥ ಜಗತ್ತನ್ನು ಕುರಿತದ್ದೂ ಹೌದು. ಬೇಂದ್ರೆಯವರು ತಮ್ಮ "ಹಕ್ಕಿ ಹಾರುತಿದೆ ನೋಡಿದಿರಾ" ಎಂಬ ಕವನಕ್ಕೆ ಸ್ವತಃ ತಾವೇ "ಬೆಕ್ಕು ಹಾರುತಿದೆ ನೋಡಿದಿರಾ" ಎಂಬ ಅಣಕವಾಡಿನ ಮೂಲಕ ಪ್ರತಿಕ್ರಿಯಿಸಿರುವುದನ್ನು ಸಹ ಈ ಸಂದರ್ಭದಲ್ಲಿ ನೆನೆಯಬಹುದು. 'ಅಣಕ' ಭಾಷಾಂತರ ವಿಧಾನವೂ ಹೌದು, ಸಾಹಿತ್ಯಕ ಸಂವೇದನೆಯೂ ಹೌದು.

ಮೌಖಿಕ ಸಾಹಿತ್ಯದ ಲಿಪೀಕರಣ

ಮೌಖಿಕ ಸಾಹಿತ್ಯದ ಲಿಪೀಕರಣವೂ ಸಹ ಭಾಷಾಂತರದ ಒಂದು ಮಾದರಿ. 1832ರಲ್ಲಿ ರೆವರೆಂಡ್ ಮಾರ್ಟನ್‌ನಿಂದ ಪ್ರಕಟವಾದ "ಬಂಗಾಳದ ಗಾದೆಗಳು" ಈ ದಿಸೆಯಲ್ಲಿ ನಡೆದ ಮೊದಲ ಪ್ರಯತ್ನ. 'ರಾಯಲ್ ಏಷಿಯಾಟಿಕ್ ಸೊಸೈಟಿ' (1804), 'ರಾಯಲ್ ಏಷಿಯಾಟಿಕ್ ಸೊಸೈಟಿ ಆಫ್ ಗ್ರೇಟ್ ಬ್ರಿಟನ್ ಅಂಡ್ ಐರ್ಲೆಂಡ್' (1829), ಈ ಸಂಸ್ಥೆಗಳ ಮೂಲಕ ಪ್ರಕಟವಾಗುತ್ತಿದ್ದ ಪತ್ರಿಕೆಗಳಲ್ಲಿ ಗಾದೆಗಳು, ಲಾವಣಿಗಳು, ಜನಪದಕಥೆ, ಜನಪದಗೀತೆಗಳು– ಹೀಗೆ ವಿವಿಧ ಪ್ರಕಾರಗಳಿಗೆ ಸೇರಿದ ಮೌಖಿಕ ಸಾಹಿತ್ಯವನ್ನು ಲಿಪೀಕರಿಸಿ ಪ್ರಕಟಿಸುವ, ಪರಿಚಯಿಸುವ, ಆಯ್ದ ಜಾನಪದ ಸಾಹಿತ್ಯವನ್ನು ಇಂಗ್ಲಿಷಿಗೆ ಭಾಷಾಂತರಿಸುವ ಕೆಲಸಗಳಾದವು. ಮೌಖಿಕ ಸಾಹಿತ್ಯದ ಲಿಪೀಕರಣ ಪ್ರಕ್ರಿಯೆ ದೊಡ್ಡ ಮಟ್ಟದಲ್ಲಿ ಮೊದಲು ನಡೆದದ್ದು ಬಂಗಾಳದಲ್ಲಿ.

ಕನ್ನಡದಲ್ಲಿ ಇಂತಹ ಕೆಲಸವನ್ನು ಮೊದಲಿಗೆ ಮಾಡಿದ್ದು ಜಾನ್ ಫೇಯ್ತ್‌ಫುಲ್ ಫ್ಲೀಟ್. ಕನ್ನಡದಲ್ಲಿ ಲಭ್ಯವಿರುವ ಕ್ಯಾತನಹಳ್ಳಿ ರಾಮಣ್ಣ ಸಂಪಾದಿತ "ಫ್ಲೀಟರು ಸಂಗ್ರಹಿಸಿದ ಲಾವಣಿಗಳು" ಕೃತಿಯನ್ನು ಇದಕ್ಕೆ ನಿದರ್ಶನವಾಗಿ ಕಾಣಬಹುದು. ಪಶ್ಚಿಮದ ವಿದ್ವಾಂಸರು ರೂಪಿಸಿದ ಮೌಖಿಕ ಸಾಹಿತ್ಯದ ವ್ಯಾಖ್ಯಾನ, ಆಕರಶೋಧ ಮತ್ತು ಅಧ್ಯಯನ ವಿಧಾನಗಳನ್ನು ಅನುಸರಿಸಿದರೂ, ದೇಶೀಯ ವಿದ್ವಾಂಸರಿಂದ ಮೌಖಿಕ ಸಾಹಿತ್ಯವನ್ನು ಲಿಪೀಕರಿಸುವ, ಅದನ್ನು ಒಂದು ಶಿಸ್ತಾಗಿ ಬೆಳೆಸುವ ಕೆಲಸ ನಡೆದದ್ದು ಮಾತ್ರ ಕನ್ನಡ ಪರಂಪರೆಯ ನಿರ್ಮಾಣದ ಭಾಗವಾಗಿ.

ಹಲಸಂಗಿಯ ಗೆಳೆಯರಿಂದ ಸಂಗ್ರಹಿಸಲ್ಪಟ್ಟು ಪ್ರಕಟವಾದ 'ಗರತಿಯ ಹಾಡು' (1931), 'ಮಲ್ಲಿಗೆ ದಂಡೆ' (1935), ಸಿಂಪಿ ಲಿಂಗಣ್ಣ ಮತ್ತು ಪಿ.ಧೂಲಾ ಅವರಿಂದ ಸಂಗ್ರಹಿಸಲ್ಪಟ್ಟ 'ಜೀವನ ಸಂಗೀತ' (1933), ಗೊರೂರು ರಾಮಸ್ವಾಮಿ ಅಯ್ಯಂಗಾರ್ ಮತ್ತು ಬಿ.ಎನ್. ರಂಗಸ್ವಾಮಿ ಅವರು ಸಂಗ್ರಹಿಸಿದ 'ಹಳ್ಳಿಯ ಹಾಡುಗಳು' (1938), ಅಜ್ಜಪ್ಪ ಅವರು ಸಂಪಾದಿಸಿ ಪ್ರಕಟಿಸಿದ 'ಕನ್ನಡ ಗಾದೆಗಳು' (1944), ಮತಿಘಟ್ಟ ಸಹೋದರರು ಸಂಗ್ರಹಿಸಿದ 'ನಾಡ ಪದಗಳು' (1943)– ಈ ಮೊದಲಾದ ಕೃತಿಗಳ ಸಂಪಾದನ ಪ್ರಕ್ರಿಯೆಯಲ್ಲಿ ಆಡು ಭಾಷೆಯ ರೂಪದಲ್ಲಿದ್ದ

ಮೌಖಿಕ ಸಾಹಿತ್ಯವು ಲಿಪೀಕರಣಕ್ಕೆ ಒಳಗಾಗಿದೆ. ಲಿಪೀಕರಣದ ಸಂದರ್ಭದಲ್ಲಿ ಆಡು ಭಾಷೆಯು ಲಿಖಿತ ಭಾಷೆಯೊಂದಿಗೆ ಹೊಂದಾಣಿಕೆ ಮಾಡಿಕೊಂಡು ಬದಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ಮೌಖಿಕ ಸಾಹಿತ್ಯದ ಲಿಪೀಕರಣವನ್ನೂ ಸಹ ಭಾಷಾಂತರದ ಒಂದು ಮಾದರಿ ಎಂದು ನೋಡಬಹುದಾದ ಸಾಧ್ಯತೆಯಿದೆ.

ಯಂತ್ರಾನುವಾದ (ಮೆಷಿನ್ ಟ್ರಾನ್ಸ್‌ಲೇಶನ್)

ಕಂಪ್ಯೂಟರ್ ಸಹಾಯದಿಂದ ಮಾಡುವ ಭಾಷಾಂತರವನ್ನು ಯಂತ್ರಾನುವಾದ ಎನ್ನುವರು. ಇದನ್ನು ಇಂಗ್ಲಿಷಿನಲ್ಲಿ 'ಕಂಪ್ಯೂಟರ್ ಅಸಿಸ್ಟೆಡ್ ಟ್ರಾನ್ಸ್‌ಲೇಶನ್' (Computer Assisted Translation) ಅಂತಲೂ ಕರೆಯುತ್ತಾರೆ. ಇತ್ತೀಚಿನ ದಿನಗಳಲ್ಲಿ ಯಂತ್ರಾನುವಾದವು 'ಆನ್‌ಲೈನ್ ಟ್ರಾನ್ಸ್‌ಲೇಶನ್', 'ಗೂಗಲ್ ಟ್ರಾನ್ಸ್‌ಲೇಶನ್' ಎಂದು ಹೆಚ್ಚು ಜನಪ್ರಿಯವಾಗುತ್ತಿದೆ. ವಾಣಿಜ್ಯ ವ್ಯವಹಾರ, ಕಾನೂನು ಮತ್ತು ರೋಗನಿದಾನಕ್ಕೆ ಸಂಬಂಧಿಸಿದ ಮಾಹಿತಿಯನ್ನು ಯಾಂತ್ರಿಕವಾಗಿ ಭಾಷಾಂತರಿಸಲಾಗುತ್ತಿದೆ.

ಇದು ಭಿನ್ನ ಭಾಷೆಗಳ ಸಮಾನಾರ್ಥಕ ಪದಕೋಶಗಳನ್ನು ಮತ್ತು ಪರ್ಯಾಯ ಪದಕೋಶಗಳನ್ನು ಕಂಪ್ಯೂಟರ್ ತಲೆಗೆ ತುಂಬಿ, ತಂತ್ರಾಂಶಗಳ ಸಹಾಯದಿಂದ ಮಾಡುವ ಭಾಷಾಂತರ ಚಟುವಟಿಕೆ. ಆದರೆ ಒಂದೊಂದು ಭಾಷೆಯ ವ್ಯಾಕರಣವೂ ಭಿನ್ನವಾಗಿರುವುದರಿಂದ ಮತ್ತು ಭಾಷೆಯೊಂದರ ಶಬ್ದಗಳಿಗೆ ಬೇರೆಬೇರೆ ಸನ್ನಿವೇಶದಲ್ಲಿ ಬೇರೆಬೇರೆ ಅರ್ಥ ಬರುವುದರಿಂದ, ಈ ಮಾದರಿಯ ಭಾಷಾಂತರ ಯಶಸ್ವೀ ಭಾಷಾಂತರ ಎನ್ನಿಸಿಕೊಂಡಿಲ್ಲ. ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದೆ. ಸಾಹಿತ್ಯದ ಭಾಷಾಂತರದಲ್ಲಿಯಂತೂ ಯಂತ್ರಾನುವಾದ ಹಾಸ್ಯಾಸ್ಪದ ಅನ್ನಿಸುತ್ತದೆ. ಇದಕ್ಕೆ ಉದಾಹರಣೆಯಾಗಿ ಹೆನ್ರಿ ನ್ಯೂಮನ್‌ನ ಪ್ರಾರ್ಥನೆಯ ರೂಪದಲ್ಲಿರುವ 'ಲೀಡ್, ಕೈಂಡ್ಲಿ ಲೈಟ್' ಕವಿತೆಯ ಎರಡು ಸಾಲನ್ನು ಗಮನಿಸಬಹುದು.

ಮೂಲ ಪಠ್ಯ:

Lead, kindly light, amid the encircling gloom,
Lead thou me on!

ಗೂಗಲ್ ಭಾಷಾಂತರ:

ಲೀಡ್, ದಯೆಯಿಂದ ಬೆಳಕು, ಸುತ್ತುವರಿದ ಕತ್ತಲೆ ಮಧ್ಯೆ,
ನನ್ನನ್ನು ಕರೆದುಕೊಂಡು ಹೋಗು!

ಬಿ.ಎಂ.ಶ್ರೀ ಭಾಷಾಂತರ:

ಕರುಣಾಳು ಬಾ ಬೆಳಕೆ, ಮುಸುಕಿದೀ ಮಬ್ಬಿನಲ್ಲಿ,
ಕೈಹಿಡಿದು ನಡೆಸೆನ್ನನು!

ಕನ್ನಡದಿಂದ ಇಂಗ್ಲಿಷಿಗೆ ಇವೇ ಸಾಲುಗಳ ಗೂಗಲ್ ಭಾಷಾಂತರ:

He was kind and bleeding, masked,
With hands and hands.

ವಾಕ್ಯರಚನಾ ದೋಷ, ಭಾವದ ಅಭಿವ್ಯಕ್ತಿಯಲ್ಲಿ ದೋಷ, ಸಂವಾದೀ ಪದಗಳ ಅನ್ವಯಿಕತೆಯಲ್ಲಿ ದೋಷ, ಒಟ್ಟಿನಲ್ಲಿ ಇಂಗ್ಲಿಷಿನಿಂದ ಕನ್ನಡಕ್ಕೆ ಮತ್ತು ಕನ್ನಡದಿಂದ ಇಂಗ್ಲಿಷಿಗೆ ಕಂಪ್ಯೂಟರ್ ಮಾಡಿರುವ ಈ ಭಾಷಾಂತರವು ದೋಷಪೂರಿತವಾಗಿದೆ. ಭಾವಾನುವಾದದ ಮಾತಿರಲಿ, ಯಥಾವತ್ತಾದ ಶಬ್ದಾನುವಾದವೂ ಸಹ ಸಾಧ್ಯವಾಗಿಲ್ಲ. ಈ ದಿಸೆಯಲ್ಲಿ ತಂತ್ರಜ್ಞಾನವನ್ನು ಮತ್ತಷ್ಟು ಅಭಿವೃದ್ಧಿಪಡಿಸಬೇಕಿದೆ.

ವಾಪಸಾತಿ ಭಾಷಾಂತರ (ಬ್ಯಾಕ್–ಟ್ರಾನ್ಸ್‌ಲೇಶನ್)

ಪಶ್ಚಿಮದ ಸಿದ್ಧಾಂತಿಗಳು ಗುರುತಿಸಿರುವ ಒಂದು ವಿಶಿಷ್ಟ ಭಾಷಾಂತರ ಪ್ರಕ್ರಿಯೆಯಿದು. ಮೂಲ ಭಾಷೆಯ ಕೃತಿಯೊಂದು ಇತರೆ ಭಾಷೆ/ಭಾಷೆಗಳಿಗೆ ಅನುವಾದಗೊಂಡು, ಮತ್ತೆ ಆ ಭಾಷೆಗಳಿಂದ ಮೂಲ ಭಾಷೆಗೆ ಅನುವಾದವಾದರೆ, ಈ ಬಗೆಯ ಅನುವಾದವನ್ನು ಬ್ಯಾಕ್–ಟ್ರಾನ್ಸ್‌ಲೇಶನ್ ಎನ್ನುವರು. ಅದನ್ನೇ ನಾವು ವಾಪಸಾತಿ ಭಾಷಾಂತರ ಅಥವಾ ಹಿಮ್ಮರಳಿದ ಭಾಷಾಂತರ ಎಂದು ಕರೆದುಕೊಳ್ಳಬಹುದು. ಯಾಂತ್ರಿಕ ಅನುವಾದದ ಸಂದರ್ಭದಲ್ಲಿ ಇದನ್ನು ರೌಂಡ್–ಟ್ರಿಪ್–ಟ್ರಾನ್ಸ್‌ಲೇಶನ್ ಎಂಬ ಹೆಸರಿನಿಂದ ಕರೆಯುತ್ತಾರೆ.

ಮೂಲ ಭಾಷೆಯಲ್ಲಿನ ಕೃತಿಯೊಂದು ಕಳೆದುಹೋಗಿ, ಅನುವಾದದ ಸ್ವರೂಪದಲ್ಲಿ ಉಳಿದುಕೊಂಡಿದ್ದಾಗ ಇಂತಹ ಅನುವಾದದ ಅಗತ್ಯ ಬೀಳುತ್ತದೆ. ಇದಕ್ಕೆ ಹೊರತಾಗಿಯೂ ಈ ಬಗೆಯ ಅನುವಾದಗಳು ನಡೆದಿರುವುದುಂಟು. ಕನ್ನಡದ ಸಂದರ್ಭದಲ್ಲಿ ಇದಕ್ಕೆ ಉದಾಹರಣೆಯಾಗಿ, ಎ.ಕೆ. ರಾಮಾನುಜನ್ ಅವರು ಭಾರತೀಯ ಭಾಷೆಗಳಿಂದ ಸಂಗ್ರಹಿಸಿ ಇಂಗ್ಲಿಷಿಗೆ ಅನುವಾದಿಸಿ ಪ್ರಕಟಿಸಿರುವ "ಫೋಕ್ ಟೇಲ್ಸ್ ಫ್ರಮ್ ಇಂಡಿಯಾ" ಕೃತಿಯಲ್ಲಿನ ಕೆಲವು ಕನ್ನಡ ಮೂಲದ ಕಥೆಗಳು ಇಂಗ್ಲಿಷಿಗೆ ಹೋಗಿ, ಇಂಗ್ಲಿಷಿನಿಂದ ಮತ್ತೆ ಕನ್ನಡಕ್ಕೆ ಬಂದಿರುವುದನ್ನು ಗಮನಿಸಬಹುದು. (ಮಹಾಬಲೇಶ್ವರರಾವ್ (ಅನು), ಭಾರತೀಯ ಜನಪದ ಕಥೆಗಳು, ನ್ಯಾಷನಲ್ ಬುಕ್ ಟ್ರಸ್ಟ್ ಆಫ್ ಇಂಡಿಯಾ, ದೆಹಲಿ, 2000 ಮತ್ತು ಕರೀಗೌಡ ಬೀಚನಹಳ್ಳಿ (ಅನು), ಕಥೆ ಮತ್ತು ಹಾಡು, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2003)

ಎಲ್.ಬಸವರಾಜು ಅವರು ಅನುವಾದಿಸಿರುವ "ಬುದ್ಧಚರಿತೆ" ಮೊದಲಿಗೆ ಸಂಸ್ಕೃತದಲ್ಲಿ ರಚಿತವಾಗಿದ್ದು ಅದು ಲಭ್ಯವಿಲ್ಲ. ಆದರೆ ಅದರ ನೇಪಾಳೀ ಪ್ರತಿ ದೊರಕಿದ್ದು, ಅದು ಇಂಗ್ಲಿಷಿನ ಮೂಲಕ ಕನ್ನಡಕ್ಕೆ ಬಂದಿದೆ. ಇದು ಭಾರತೀಯ ಮೂಲದ ಕೃತಿಯೊಂದು ಭಾಷಾಂತರದ ಮೂಲಕ ವಿದೇಶಕ್ಕೆ ತಲುಪಿ, ಸುತ್ತುಬಳಸಿನ ಭಾಷಾಂತರದ ಮೂಲಕ ಮತ್ತೆ ಭಾರತಕ್ಕೆ ವಾಪಸ್ಸಾದ ಬಗೆ.

ಕೆಲವೊಮ್ಮೆ ಭಾಷಾಂತರದ ನೈಜತೆಯನ್ನು ಅರಿಯಲು ವಾಪಸಾತಿ

ಭಾಷಾಂತರ ಮಾಡುವುದುಂಟು. ಬೇಂದ್ರೆಯವರ ಕವನವೊಂದನ್ನು ಇಂಗ್ಲಿಷಿಗೆ ಭಾಷಾಂತರಿಸಿ, ಇಂಗ್ಲಿಷ್ ಭಾಷಾಂತರದಲ್ಲಿರುವ ಬೇಂದ್ರೆಯವರ ಕವನವನ್ನು ಬೇರೆ ಅನುವಾದಕರ ಮೂಲಕ ಮತ್ತೆ ಕನ್ನಡಕ್ಕೆ ಭಾಷಾಂತರ ಮಾಡಿಸುವುದು. ಹೀಗೆ ಮಾಡುವುದರ ಮೂಲಕ ಯಥಾವತ್ ಭಾಷಾಂತರ ಆಗಿದೆಯೇ ಇಲ್ಲವೇ ಎಂಬುದನ್ನು ತಿಳಿಯಲಾಗುತ್ತದೆ.

ರಫ್ತು ಭಾಷಾಂತರ – ವಿಲೋಮ ಭಾಷಾಂತರ

ಭಾಷಾಂತರಕಾರನು ತನ್ನದಲ್ಲದ ಭಾಷೆಯಿಂದ ತನ್ನ ಮಾತೃಭಾಷೆಗೆ ಪಠ್ಯವನ್ನು ತಂದುಕೊಳ್ಳುವುದರ ಬದಲಿಗೆ, ತನ್ನ ಮಾತೃಭಾಷೆಯಿಂದ ತನ್ನದಲ್ಲದ ಭಾಷೆಗೆ ಭಾಷಾಂತರಿಸಿ ಕೊಟ್ಟರೆ ಅದು 'ರಫ್ತು ಭಾಷಾಂತರ' ಎನ್ನಿಸಿಕೊಳ್ಳುತ್ತದೆ. ಇಲ್ಲಿ ಉದ್ದೇಶಿತ ಭಾಷೆಯು ಬಯಸದಿದ್ದರೂ ಪಠ್ಯವು ಮೂಲಭಾಷೆಯಿಂದ ಉದ್ದೇಶಿತ ಭಾಷೆಗೆ ರಫ್ತು ಆಗಬಹುದು.

ಕನ್ನಡದಿಂದ ಇಂಗ್ಲಿಷಿಗೆ ಕನ್ನಡ ಲೇಖಕರೇ ಕಳುಹಿಸಿಕೊಟ್ಟಿರುವ ವಚನಗಳು, ಕುವೆಂಪು ಅವರ ಕವಿತೆ–ಕಾದಂಬರಿಗಳು, ತೇಜಸ್ವಿ ಮತ್ತು ಅನಂತಮೂರ್ತಿಯವರ ಕತೆ ಕಾದಂಬರಿಗಳು, ಕಾರ್ನಾಡರ ನಾಟಕಗಳ ಇಂಗ್ಲಿಷ್ ಆವೃತ್ತಿಗಳು ರಫ್ತು ಭಾಷಾಂತರಗಳಿಗೆ ಉದಾಹರಣೆಗಳು.

ಕನ್ನಡ ವಿಶ್ವವಿದ್ಯಾಲಯದ 'ಸೆಂಟರ್ ಫಾರ್ ಟ್ರಾನ್ಸ್‌ಲೇಶನ್ಸ್' ಮೂಲಕ ಪ್ರಕಟವಾದ ಪುಸ್ತಕ ಮಾಲೆಯ ಸಂಯೋಜಕರಾಗಿ ವಿ.ಬಿ.ತಾರಕೇಶ್ವರ್ ಅವರು ಭಾಷಾಂತರಗಳಲ್ಲಿನ ಈ ಪ್ರವೃತ್ತಿಯ ಕುರಿತು ಚರ್ಚಿಸುತ್ತಾ, ಈ ಮೊದಲು 'ಅಸಹಜ' ಭಾಷಾಂತರ ಆಗಿದ್ದ ರಫ್ತು ಭಾಷಾಂತರವು ಇಂದು ವಸಾಹತೋತ್ತರ ಸಂದರ್ಭದಲ್ಲಿ 'ಸಹಜ' ಭಾಷಾಂತರ ಪ್ರಕ್ರಿಯೆಯೇ ಆಗುತ್ತಿದೆ ಎಂದು ಬರೆಯುತ್ತಾರೆ. "ಕನ್ನಡ–ಮಲಯಾಳಂ ಭಾಷಾಂತರ ಪ್ರಕ್ರಿಯೆ" ಕೃತಿಯಲ್ಲಿ ಮೋಹನ ಕುಂಟಾರ್ ಅವರು ಈ ಮಾದರಿಯ ಭಾಷಾಂತರ ಪ್ರಕ್ರಿಯೆ ಕುರಿತು ಚರ್ಚಿಸಿದ್ದಾರೆ. ಅವರ ದೃಷ್ಟಿಯಲ್ಲಿ "ಆಕರ ಭಾಷೆಯಿಂದ ಬಲವಂತವಾಗಿ ಹೊರದಬ್ಬಿದ ಭಾಷಾಂತರಗಳು ರಫ್ತು ಭಾಷಾಂತರಗಳು." ಈ ಮಾದರಿಯ ಭಾಷಾಂತರವನ್ನು ಎಂ.ಉಷಾ ಅವರು 'ವಿಲೋಮ ಭಾಷಾಂತರ' ಎಂದಿದ್ದಾರೆ.

ರಫ್ತು ಭಾಷಾಂತರಗಳಲ್ಲಿ ಅನುವಾದಕನು ಆಕರಭಾಷೆಯವನೇ ಆಗಿರುತ್ತಾನೆ. ತನ್ನ ಭಾಷೆ–ಸಂಸ್ಕೃತಿಯಲ್ಲಿ ತನಗೆ ಶ್ರೇಷ್ಠವೆನಿಸಿದ್ದನ್ನು, ಮುಖ್ಯವೆನಿಸಿದ್ದನ್ನು ಉದ್ದೇಶಿತ ಭಾಷೆಗೆ ಅನುವಾದ ಮಾಡಿಕೊಡುತ್ತಾನೆ. 'ಮಾಡಿಕೊಳ್ಳಬೇಕಾದ ಪ್ರಕ್ರಿಯೆ' ಇಲ್ಲಿ 'ಮಾಡಿಕೊಡುವ ಪ್ರಕ್ರಿಯೆ' ಆಗುವುದರಿಂದ ಭಾಷಾಂತರ ಮೀಮಾಂಸೆಯಲ್ಲಿನ 'ಸ್ವ' ಮತ್ತು 'ಅನ್ಯ', 'ಮೂಲಭಾಷೆ' ಮತ್ತು 'ಲಕ್ಷ್ಯಭಾಷೆ' ಎಂಬ ಕಲ್ಪನೆಗಳು ತಲೆಕೆಳಗಾಗುತ್ತಿವೆ. ಭಾಷಾಂತರವೆಂದರೆ ಮಾಡಿಕೊಳ್ಳಬೇಕಾದ ಕ್ರಿಯೆ ಆಗಿರುವಂತೆ, ಮಾಡಿಕೊಡುವ ಕ್ರಿಯೆಯೂ ಹೌದು ಎಂದು ಭಾಷಾಂತರದ ವ್ಯಾಖ್ಯಾನ

ಬದಲಾಗುತ್ತಿದೆ.

ಗುಂಪು ಭಾಷಾಂತರ

ಇದು ಇತ್ತೀಚೆಗೆ ಭಾಷಾಂತರ ಚಟುವಟಿಕೆಗಳಲ್ಲಿ ಜನಪ್ರಿಯತೆಯನ್ನು ಪಡೆದುಕೊಳ್ಳುತ್ತಿರುವ ಪ್ರವೃತ್ತಿ. ಇದನ್ನು ತಂಡ ಭಾಷಾಂತರ, ಸಾಮುದಾಯಿಕ ಭಾಷಾಂತರ ಅಂತಲೂ ಕರೆಯಬಹುದು. ಒಬ್ಬನೇ ವ್ಯಕ್ತಿ ಭಾಷಾಂತರ ಚಟುವಟಿಕೆಯಲ್ಲಿ ತೊಡಗಿಕೊಳ್ಳುವ ಬದಲಿಗೆ, ವಿವಿಧ ಭಾಷೆಗಳನ್ನು ಬಲ್ಲ ಲೇಖಕರ ಗುಂಪು ಅಥವಾ ಒಂದು ಸಮಿತಿಯನ್ನು ರಚಿಸಿಕೊಂಡು ಭಾಷಾಂತರ ಮಾಡುವ ವಿಧಾನವಿದು.

ಮೂಲಭಾಷೆ ಮತ್ತು ಲಕ್ಷ್ಯಭಾಷೆ ಎರಡನ್ನೂ ಬಲ್ಲ, ಮೂಲಭಾಷೆ ಮಾತ್ರ ಬಲ್ಲ ಮತ್ತು ಲಕ್ಷ್ಯಭಾಷೆ ಮಾತ್ರ ಬಲ್ಲ, ಹೀಗೆ ವಿವಿಧ ಬಗೆಯ ಲೇಖಕರನ್ನು ಒಂದೆಡೆ ಸೇರಿಸಲಾಗುತ್ತದೆ. ಇವರಲ್ಲಿ ಸೃಜನಶೀಲಕವಿಗಳು, ವೃತ್ತಿನಿರತ ಭಾಷಾಂತರಕಾರರು, ಭಾಷಾಶಾಸ್ತ್ರಜ್ಞರು, ಭಾಷಾಂತರಶಾಸ್ತ್ರಜ್ಞರು, ವಿಮರ್ಶಕರು, ಬಹುಭಾಷಾ ಪಂಡಿತರು ಇರುತ್ತಾರೆ. ಇವರೆಲ್ಲರ ಸಾಮೂಹಿಕ ಪ್ರಯತ್ನದ ಮೂಲಕ ಎರಡು ಭಾಷೆಗಳ ನಡುವೆ ಪರಸ್ಪರ ಇಲ್ಲಿಂದ ಅಲ್ಲಿಗೆ ಮತ್ತು ಅಲ್ಲಿಂದ ಇಲ್ಲಿಗೆ ಸಾಹಿತ್ಯದ ಭಾಷಾಂತರ ಮಾಡಲಾಗುತ್ತದೆ.

ಗುಂಪು ಭಾಷಾಂತರವನ್ನು ಕಾರ್ಯಾಗಾರ ಆಯೋಜಿಸುವುದರ ಮೂಲಕವೋ ಅಥವಾ ಆನ್‌ಲೈನ್ ಸಂವಹನದ ಮೂಲಕವೋ ಅಥವಾ ಪತ್ರವ್ಯವಹಾರದ ಮೂಲಕವೋ, ಹೇಗೆ ಅನುಕೂಲವಾದರೆ ಹಾಗೆ ಮಾಡಬಹುದು. ಹೀಗೆ ಮಾಡುವುದರಿಂದ ಒಂದು ಪಠ್ಯವನ್ನು ಅದರ ಎಲ್ಲ ಸೂಕ್ಷ್ಮತೆಗಳೊಂದಿಗೆ ಮತ್ತೊಂದು ಭಾಷೆಗೆ ಒಯ್ಯಬಹುದು.

ಒಬ್ಬನೇ ಭಾಷಾಂತರಕಾರ ಎರಡೂ ಭಾಷೆಗಳ ಭಾಷಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಆಯಾಮಗಳನ್ನು ಅರಿತಿರಲು ಸಾಧ್ಯವಿಲ್ಲ. ಅದಕ್ಕೆ ಪರಿಹಾರವೆಂಬಂತೆ ನಮ್ಮ ಮುಂದೆ ಇರುವ ವಿಧಾನ 'ಗುಂಪು ಭಾಷಾಂತರ.' ವಿವಿಧ ಭಾಷಾಂತರಕಾರರ ನುಡಿಬಳಕೆ, ಭಾಷಾ ಶೈಲಿ, ನಿರೂಪಣೆಯ ಕ್ರಮ ಭಿನ್ನವಾಗಿರುತ್ತದೆ. ಇಂತಹ ಸಂದರ್ಭದಲ್ಲಿ ಸಮಿತಿಯ ಸಂಚಾಲಕರು ಏಕರೂಪತೆಯನ್ನು ಕೊಡುವ ಹೊಣೆ ಹೊರಬೇಕಾಗುತ್ತದೆ.

ಸಂಕ್ಷೇಪೀಕರಣ – ಸಂಗ್ರಹಾನುವಾದ

ಮೂಲಪಠ್ಯವನ್ನು ಲಕ್ಷ್ಯ ಭಾಷೆಗೆ ಸಂಗ್ರಹರೂಪದಲ್ಲಿ ತಂದರೆ, ಅದು ಸಂಕ್ಷೇಪೀಕರಣ. ವಿಸ್ತಾರಾನುವಾದಕ್ಕೆ ವಿರುದ್ಧವಾದ ಭಾಷಾಂತರದ ಮಾದರಿಯಿದು. ಇದನ್ನು ಸಂಗ್ರಹಾನುವಾದ ಅಂತಲೂ ಕರೆಯುತ್ತಾರೆ.

ಪ್ರಾಚೀನ ಕನ್ನಡ ಪಠ್ಯಗಳಲ್ಲಿ ಬಹುಪಾಲು ಸಂಕ್ಷೇಪೀಕರಣಗಳೇ. ಪಂಪ, ರನ್ನ, ಜನ್ನ, ಕುಮಾರವ್ಯಾಸ – ಇವರೆಲ್ಲರೂ ಮೂಲಪಠ್ಯಗಳ ನಿರೂಪಣೆಯ

ಸಂದರ್ಭದಲ್ಲಿ ತಮ್ಮ 'ಸಂಗ್ರಹಣ ಗುಣ'ವನ್ನು ತೋರಿದವರೇ ಆಗಿದ್ದಾರೆ. "ಕತೆ ಪಿರಿದಾದೊಡಂ ಕತೆಯ ಮೆಯ್ಗಿಡಲೀಯದೆ ಮುಂ ಸಮಸ್ತ ಭಾರತಮನ್ ಅಪೂರ್ವಮಾಗೆ ಪೇಳ್ದ" ಎನ್ನುವಲ್ಲಿ ಪಂಪನು, ತಾನು (ಗಾತ್ರದಲ್ಲಿ) ಪಿರಿದಾದ ಮೂಲಪಠ್ಯವನ್ನು ಆ ಪಠ್ಯದ ಮೆಯ್ಗಿಡಲೀಯದೆ (ಬಾಹ್ಯರೂಪವನ್ನು ಕೆಡಿಸದೆ) ಸಂಕ್ಷೇಪಿಸುವ ಮಾತನ್ನಾಡುತ್ತಿದ್ದಾನೆ.

ಮತ್ತೊಂದು ಕೃತಿಯನ್ನು ಮುಂದಿಟ್ಟುಕೊಂಡು ಬರೆಯುವವನಿಗೆ ಅಭಿವ್ಯಕ್ತಿ ಸ್ವಾತಂತ್ರ್ಯವಿರುವುದು ಆ ಕೃತಿಯನ್ನು ಸಂಗ್ರಹಿಸುವಲ್ಲಿ, ವಿಸ್ತರಿಸುವಲ್ಲಿ ಮತ್ತು ಒಟ್ಟು ಕೃತಿಯ ಧ್ವನಿ ಬದಲಿಸುವಲ್ಲಿಯೇ. ಆದಿಪುರಾಣದಲ್ಲಿ ಎದ್ದುಕಾಣುವ ಪಂಪನ ಈ ಬಗೆಯ ಸಂಕ್ಷೇಪಣ ಕಲೆಯನ್ನು ಕುರಿತು ಜಿ.ಹೆಚ್.ನಾಯಕರು ಹೀಗೆ ಬರೆಯುತ್ತಾರೆ: "ವಿಸ್ತಾರವಾಗಿದ್ದ ಪೂರ್ವ ಪುರಾಣವನ್ನು ಸಂಗ್ರಹಿಸುವಲ್ಲಿ, ಆ ಮೂಲಕ ಅದರ ತಿರುಳನ್ನು ಕನ್ನಡಿಸುವಲ್ಲಿ ಆತ ತೋರುವ ಔಚಿತ್ಯಪ್ರಜ್ಞೆ ಮತ್ತು ರಸಗ್ರಹಣ ವಿವೇಕ ಅತ್ಯುತ್ತಮ ಮಟ್ಟದ್ದಾಗಿದೆ." ಇವರ ಪ್ರಕಾರ, ಈ ಆದಿಪುರಾಣ ಕಾವ್ಯದ ವಸ್ತು ಮತ್ತು ಅನುಭವ ಸ್ವಯಾರ್ಜಿತವಾಗಿಲ್ಲದೆ ಇರುವುದರಿಂದ ಪಂಪನ ಅಭಿವ್ಯಕ್ತಿ ಸಾಮರ್ಥ್ಯವನ್ನೆಲ್ಲಾ ಆತನ ಗ್ರಥನಕೌಶಲದಲ್ಲಿ (ಸಂಕ್ಷೇಪಣ ಕಲೆಯಲ್ಲಿ) ಗುರುತಿಸಬೇಕಾಗಿದೆ.

ಒಳಪೊಕ್ಕು ನೋಡೆ ಭಾರತ
ದೊಳಗಣ ಕಥೆಯಿಲ್ಲಮೀ ಗದಾಯುದ್ಧದೊಳಂ
ತೊಳಗೊಂಡತ್ತೆನೆ ಸಿಂಹಾ
ವಲೋಕನಕ್ರಮದಿನರಿಪಿದಂ ಕವಿರನ್ನಂ

ಈ ಪದ್ಯದಲ್ಲಿ ರನ್ನ ತಾನು ಸಿಂಹಾವಲೋಕನ ಕ್ರಮದಲ್ಲಿ ಕಾವ್ಯವನ್ನು ನಿರೂಪಿಸಿದ್ದೇನೆ ಎಂದು ಸೂಚಿಸುತ್ತಿರುವುದರ ಜೊತೆಗೆ, ಮಹಾಭಾರತದ ಕಥೆಯೆಲ್ಲವನ್ನೂ ಈ ಗದಾಯುದ್ಧ ಸಂಗ್ರಹರೂಪದಲ್ಲಿ ಒಳಗೊಂಡಿದೆ ಎಂದು ಪ್ರಮಾಣೀಕರಿಸುತ್ತಿದ್ದಾನೆ. ರನ್ನನ ನಿರೂಪಣಾ ತಂತ್ರವು 'ಸಿಂಹಾವಲೋಕನ ಕ್ರಮ'ವಾದರೆ, ಅವನ ಭಾಷಾಂತರದ ಮಾದರಿ 'ಸಂಕ್ಷೇಪೀಕರಣ'.

ಸಂಸ್ಕೃತದ ಬಾಣನ "ಕಾದಂಬರಿ"ಯನ್ನು ಗಂಗಾಧರ ಮಡಿವಾಳೇಶ್ವರ ತುರಮರಿಯವರು ಸಂಸ್ಕೃತದಿಂದ ನೇರವಾಗಿ "ಕನ್ನಡ ಬಾಣ ಕಾದಂಬರಿ" (1876–77) ಎಂಬ ಶೀರ್ಷಿಕೆಯಲ್ಲಿ ಕನ್ನಡಕ್ಕೆ ತಂದಿದ್ದಾರೆ. ಇದು ಕನ್ನಡ ಗದ್ಯ ಬೆಳವಣಿಗೆಯ ಇತಿಹಾಸದಲ್ಲಿ ಒಂದು ಮೈಲುಗಲ್ಲು. ಕನ್ನಡದಲ್ಲಿ ಆಗಿನ್ನೂ ಕಾದಂಬರಿ ಪ್ರಕಾರವೇ ಬಳಕೆಗೆ ಬಾರದಿದ್ದ ಸಂದರ್ಭದಲ್ಲಿ ಆಧುನಿಕತೆಗೆ ತೆರೆದುಕೊಳ್ಳುತ್ತಿದ್ದ ಓದುಗವಲಯವನ್ನು ಗಮನದಲ್ಲಿಟ್ಟುಕೊಂಡು ಸಂಗ್ರಹರೂಪದಲ್ಲಿ ಅವರು ಮಾಡಿದ ಭಾಷಾಂತರವನ್ನು ಸಂಕ್ಷೇಪೀಕರಣ ಎನ್ನಬಹುದು. ಇದನ್ನು ತಮ್ಮ ಕೃತಿಯ ಪ್ರಸ್ತಾವನೆಯಲ್ಲಿ ಸ್ವತಃ ತುರಮರಿಯವರೇ ಹೀಗೆ ಸ್ಪಷ್ಟಪಡಿಸುತ್ತಾರೆ: "ಸಂಸ್ಕೃತ ಕಾದಂಬರಿಯೊಳಗಿನ ಅತಿ ಮನೋಹರವಾದ ಕಥೆಯನ್ನು ನಮ್ಮ ದೇಶಬಾಂಧವರ

ಸಲುವಾಗಿ ಕನ್ನಡಿಸಿ, ಸ್ವಲ್ಪದರೊಳಗೆ ಬರೆದಿದ್ದೇನೆ. ಇದು ಮೂಲಗ್ರಂಥದ ಚತುರ್ಥಾಂಶವಾದೀತು."

ಸಂಕ್ಷೇಪೀಕರಣದಲ್ಲಿ ಮೂಲಪಠ್ಯದ ಎಲ್ಲ ವಿವರಗಳನ್ನು ಅಡಕಗೊಳಿಸಿ ಹೇಳಬೇಕು ಎನ್ನುವುದು ನಿಯಮ. ಮೂಲಪಠ್ಯವು ಗಾತ್ರದಲ್ಲಿ ವಿಸ್ತಾರವಾಗಿದ್ದು, ಲಕ್ಷ್ಯ ಭಾಷೆಯ ಓದುಗ ವಲಯದ ಅನುಕೂಲಕ್ಕಾಗಿ ಅನುವಾದದಲ್ಲಿ ಸಂಕ್ಷೇಪಣ ಮಾಡಬಹುದು. ಕೆಲವೊಮ್ಮೆ ಒಂದೇ ಭಾಷೆಯೊಳಗೆಯೇ ಸಂಕ್ಷೇಪೀಕರಣ ಆಗಬಹುದು.

ಇಂಗ್ಲಿಷಿನಲ್ಲಿಯಂತೂ, ಬಿಡುವಿಲ್ಲದ ಬದುಕಿನಲ್ಲಿ ಓದುಗರ ಸಮಯದ ಉಳಿತಾಯವನ್ನೂ, ಆಗತಾನೇ ಸಾಹಿತ್ಯಕ್ಕೆ ಪ್ರವೇಶ ಪಡೆಯುತ್ತಿರುವ ಹೊಸ ಓದುಗರನ್ನೂ, ಪಠ್ಯಕ್ರಮದ ಭಾಗವಾಗಿ ವಿದ್ಯಾರ್ಥಿಗಳನ್ನೂ ಗಮನದಲ್ಲಿಟ್ಟುಕೊಂಡು ಬಹುಪಾಲು ಜನಪ್ರಿಯ ಕಾದಂಬರಿಗಳ ಸಂಕ್ಷಿಪ್ತ ಆವೃತ್ತಿಗಳು (Concise or abridged Editions) ಪ್ರಕಟವಾಗಿವೆ. ಎಷ್ಟೋ ಸಂದರ್ಭಗಳಲ್ಲಿ ನಿರ್ದಿಷ್ಟ ಓದುಗ ಸಮೂಹವನ್ನು ಉದ್ದೇಶಿಸಿ ಸಂಕ್ಷಿಪ್ತ ಆವೃತ್ತಿಗಳು ಪುನರ್‌ರಚಿಸಲ್ಪಡುತ್ತವೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಒಂದು ಸರಣಿಯನ್ನೇ ಸಂಕ್ಷೇಪಿಸಿ ಅನುವಾದಿಸಿ ಪ್ರಕಟಿಸಿರುವುದನ್ನು ಇದಕ್ಕೆ ನಿದರ್ಶನವಾಗಿ ಕಾಣಬಹುದು.

ಪರಾಮರ್ಶನ ಗ್ರಂಥಗಳು:

1. ಅಂಬಿಕಾತನಯದತ್ತ, (1963), ಕನ್ನಡ ಮೇಘದೂತ, ಧಾರವಾಡ: ಸಮಾಜ ಪುಸ್ತಕಾಲಯ.
2. ಉಷಾ ಎಂ., (2014), ಭಾಷಾಂತರ ಪ್ರವೇಶಿಕೆ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
3. ಕ್ಯಾತನಹಳ್ಳಿ ರಾಮಣ್ಣ, (1991), ಫ್ಲೀಟರು ಸಂಗ್ರಹಿಸಿದ ಲಾವಣಿಗಳು, ಮೈಸೂರು: ಮೈಸೂರು ವಿಶ್ವವಿದ್ಯಾಲಯ.
4. ನಾಗರಾಜ ಡಿ.ಆರ್., (2006), ಸಾಹಿತ್ಯ ಕಥನ, ಸಾಗರ: ಅಕ್ಷರ ಪ್ರಕಾಶನ.
5. ಪರಮಶಿವಯ್ಯ ಜೀ.ಶಂ., (1975), ಜಾನಪದ: ಕೆಲವು ಮುಖಗಳು, ಬೆಂಗಳೂರು: ಕರ್ನಾಟಕ ಸಹಕಾರೀ ಪ್ರಕಾಶನ ಮಂದಿರ.
6. ಬಾಲುರಾವ್ ಶಾ. (ಅನು), (1991), ಆನಾ ಅಹಮತೋವಾ: ರಿಕ್ವಿಯಂ ಮತ್ತಿತರ ನೂರು ಕವಿತೆಗಳು, ಹೆಗ್ಗೋಡು: ಅಕ್ಷರ ಪ್ರಕಾಶನ.
7. ಮೋಹನ ಕುಂಟಾರ್ ಎ., (2014), ಕನ್ನಡ–ಮಲಯಾಳಂ ಭಾಷಾಂತರ ಪ್ರಕ್ರಿಯೆ, ಹಂಪಿ: ಕನ್ನಡ ವಿಶ್ವವಿದ್ಯಾಲಯ.
8. ರಾಮಾನುಜನ್ ಎ.ಕೆ., (2011), ಎ.ಕೆ.ರಾಮಾನುಜನ್ ಸಮಗ್ರ, ಧಾರವಾಡ: ಮನೋಹರ ಗ್ರಂಥ ಮಾಲಾ.
9. ವೆಂಕಟಾಚಲಶಾಸ್ತ್ರಿ ಟಿ.ವಿ. (ಸಂ), (2006), ಪಂಪ ಸಂಪುಟ (ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯಂ), ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
10. ಶಿವರುದ್ರಪ್ಪ ಜಿ.ಎಸ್. (ಸಂ), (1991), ಪಂಪ: ಒಂದು ಅಧ್ಯಯನ, ಬೆಂಗಳೂರು: ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ.
11. ಶ್ರೀಕಂಠಯ್ಯ ತೀ.ನಂ., (1949), ಕವಿ ರನ್ನನ ಗದಾಯುದ್ಧ ಸಂಗ್ರಹಂ, ಮೈಸೂರು: ಕಾವ್ಯಾಲಯ.
12. ಶ್ರೀಕಂಠಯ್ಯ ಬಿ.ಎಂ., (1966), ಇಂಗ್ಲಿಷ್ ಗೀತಗಳು, ಮೈಸೂರು: ವಿಶ್ವಸಾಹಿತ್ಯ ಪ್ರಕಾಶಕರು.
13. ದ ಬೈಬಲ್ ಸೊಸೈಟಿ ಆಫ್ ಇಂಡಿಯಾ, (2010), ಹೊಸ ಒಡಂಬಡಿಕೆ, ಬೆಂಗಳೂರು: ದ ಬೈಬಲ್ ಸೊಸೈಟಿ ಆಫ್ ಇಂಡಿಯಾ.
14. Clifford E. Landers, (2010), Literary Translation: A Practical Guide, New Delhi: Viva Books.
15. Ramachandran C.N. (ed), (2007), Strings & Cymbals, Hampi: Prasaranga, Kannada University.